ದಿನಾಂಕಃ 09.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟಿ ಸವಾಲುಃ ಎದುರುದಾರರ ಪರ ಶ್ರೀ ವಿ ಎಂ ಎಸ್ ವಕೀಲರಿಂದಃ</u>

1. ನಾನು ಜೀವನಾಂಶ ಬೇಕೆಂದು ಈ ಅರ್ಜಿಯನ್ನು ಸಲ್ಲಿಸಿದ್ದೇನೆ. ನನ್ನ ಮದುವೆ ಲಕ್ಷ್ಮೀಪುರ ಗ್ರಾಮದಲ್ಲಿ ನೆರವೇರಿರುತ್ತದೆ. ಎದುರುದಾರರ ಮನೆಗೂ ಮತ್ತು ನಮ್ಮ ವಿವಾಹವಾದ ಕಲ್ಯಾಣ ಮಂಟಪಕ್ಕೂ 100 ಅಡಿಗಳ ಅಂತರವಿರುತ್ತದೆ ಎಂದರೆ ಸರಿ. ಎದುರುದಾರರೇ ನಮ್ಮ ವಿವಾಹ ಖರ್ಚನ್ನು ಮಾಡಿರುತ್ತಾರೆ ಎಂದರೆ ಸರಿ. ನಾನು ಅರ್ಜಿಯಲ್ಲಿ ವಿವಾಹ ಖರ್ಚು ವೆಚ್ಚಗಳನ್ನು ನಮ್ಮ ತವರು ಮನೆಯವರು ಮಾಡಿರುತ್ತಾರೆ ಎಂದು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

2. ಅರ್ಜಿಯಲ್ಲಿ ಹೇಳಿರುವ ರೂ.1,00,000/- ಹಣವನ್ನು ಎದುರುದಾರರಿಗೆ ನನ್ನ ತಂದೆ-ತಾಯಿ ಮತ್ತು ನಮಂ ಬಾವ ನೀಡಿರುತ್ತಾರೆ. ಎದುರುದಾರರಿಗೆ ನಾವು ಯಾವುದೇ ರೀತಿ ವಿವಾಹ ಸಮಯದಲ್ಲಿ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

3. ಎದುರುದಾರರಿಗೆ ವಿವಾಹ ಸಮಯದಲ್ಲಿ ಕತ್ತಿನ ಸರ ನೀಡಿರುತ್ತೇವೆ. ಸದರಿ ಕತ್ತಿನ ಸರವನ್ನು ಖರೀದಿಸಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಸ್ವತಃ ಅದನ್ನು ನನ್ನ ತಂದೆಯವರು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ವಿವಾಹ ಸಮಯದಲ್ಲಿ ಎದುರುದಾರರಿಗೆ ಯಾವುದೇ ಆಭರಣ ನೀಡದೇ ಇರುವುದರಿಂದ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಮನೆಗೆ ಅವಶ್ಯಕವಾದ ವಸ್ತುಗಳನ್ನು ವಿವಾಹ ಸಮಯದಲ್ಲಿ ನೀಡಿದ ವಸ್ತುಗಳ ಖರೀದಿಸಿದ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ತವರು ಮನೆಯವರು ಎದುರುದಾರರಿಗೆ ಯಾವುದೇ ಬೀರು, ಮಂಚ ಹಾಗೂ ಇತರೆ ವಸ್ತುಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ಆಭರಣ ನೀಡಿದ ಮತ್ತು ಬೀರು ಹಾಗೂ ಮಂಚ ಇವುಗಳನ್ನು ಎದುರುದಾರರಿಗೆ ನೀಡಲಾಗಿದೆ ಎಂದು ತೋರಿಸಲು ಭಾವಚಿತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ತವರು ಮನೆಯವರು ಅರ್ಜಿಯಲ್ಲಿ

ಹೇಳಿರುವ ವಸ್ತುಗಳು ಹಾಗೂ ಚಿನ್ನವನ್ನು ನೀಡದೇ ಇರುವುದರಿಂದ ಭಾವಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಮತ್ತು ಎದುರುದಾರರು ವಿವಾಹದ ನಂತರ 1 ವರ್ಷದ ವರೆಗೆ ಅನ್ಯೋನ್ಯವಾಗಿದ್ದೆವು. ಆಗ ನಾನು ಗರ್ಭಿಣಿಯಾಗಿದ್ದೆ ಎಂದರೆ ಸರಿ. ನಾನು ಗರ್ಭಿಯಾದ ಸಂದರ್ಭದಲ್ಲಿ ಎದುರುದಾರರೇ ತಾಯಿ ಕಾರ್ಡನ್ನು ಮಾಡಿಸಿದ್ದರು ಎಂದರೆ ಸರಿ. ನಾನು ಅವಳಿ ಜವಳಿ ಮಕ್ಕಳಿಗೆ ಜನ್ಮ ನೀಡಿರುತ್ತೇನೆ ಎಂದರೆ ಸರಿ. ನಾನು ಗರ್ಭಿಣಿಯಾದಾಗ ಕೃತಿ ಸ್ಕ್ಯಾನಿಂಗ್ ಸೆಂಟರ್, ಹೊಸಕೋಟೆಗೆ ಎದುರುದಾರರು ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿಯು ಒಂದು ಬಾರಿ ಮಾತ್ರ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೆರಿಗೆಗಾಗಿ ನನ್ನ ತವರು ಮನೆಗೆ ಹೋಗುವವರೆಗೂ ಹೊಸಕೋಟೆ ಆಸ್ಪತ್ರೆಯಲ್ಲಿ ನನಗೆ ಸ್ಕ್ಯಾನಿಂಗ್ ಮಾಡಲಾಗಿರುತ್ತದೆ ಎಂದರೆ ಸರಿ.

5. ಎದುರುದಾರರು ನನಗೆ ಸೀಮಂತ ಶಾಸ್ತ್ರ ಮಾಡಿ ತವರು ಮನೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೆರಿಗೆಗಾಗಿ ನನ್ನ ತವರು ಮನೆಗೆ ಹೋಗುವ ಕಾಲಕ್ಕೆ ನನ್ನ ಅತ್ತೆ-ಮಾವ ಜೀವಂತ ಇದ್ದರು ಎಂದರೆ ಸರಿ. ನನಗೆ ಹೆರಿಗೆಯು ಚಿಕ್ಕಬಳ್ಳಾಪುರದ ಮಿಷನ್ ಆಸ್ಪತ್ರೆಯಲ್ಲಿ ಆಗಿರುತ್ತದೆ. ನನಗೆ ಹೆರಿಗೆಯಾದ ಬಗ್ಗೆ ಎದುರುದಾರರಿಗಾಗಲೀ ಅಥವಾ ಅವರ ಕುಟುಂಬಸ್ಥರಿಗಾಗಲೀ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹೆರಿಗೆಯಾದ ಬಗ್ಗೆ ಮತ್ತು ಮಕ್ಕಳು ಜನಿಸಿದ ಬಗ್ಗೆ ಎದುರುದಾರರಿಗಾಗಲೀ ಅಥವಾ ಅವರ ಕುಟುಂಬಸ್ಥರಿಗಾಗಲೀ ನಾನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

6. ಎದುರುದಾರರಿಗೆ ಈಗ 63 ವರ್ಷ ವಯಸ್ಸು ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಪಿ-2 ರಿಂದ 12 ರ ಪಹಣಿಯಲ್ಲಿರುವ ಜಮೀನು ಎದುರುದಾರರಿಗೆ ಮಾತ್ರ ಸೇರಿದ ಜಮೀನುಗಳಾಗಿರದೇ ಅವರ ಕುಟುಂಬಕ್ಕೆ ಸೇರಿದ ಜಮೀನುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಎದುರುದಾರರ ತೋಟದ ಕೆಲಸ ಮಾಡುತ್ತಾರೆ. ಎದುರುದಾರರು ಟ್ರಾಕ್ಟರ್ ಚಾಲಕ ಆಗಿರುತ್ತಾರೆ, ಯಾವುದೇ ತೋಟದ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿ ಜೊತೆ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಳುವನಹಳ್ಳಿಯ ನಮ್ಮ ತವರು ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ನನ್ನ ತವರು ಮನೆಯಲ್ಲಿ

ವಾಸವಾಗಿರುವುದರಿಂದ ನಾನು ಯಾವುದೇ ಬಾಡಿಗೆ ಪಾವತಿಸುತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಸೇರಿದ ಸ್ವಂತ ಮನೆಯಲ್ಲಿ ನಾನು ಪ್ರತ್ಯೇಕವಾಗಿ ವಾಸವಿದ್ದೇನೆ.

ಮುಂದುವರೆದ ಪಾಟೀ ಸವಾಲಿಗಾಗಿ ಎದುರುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸರಿ ಇದೆ.**

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.